## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ ವೆಂಕಟೇಶ್ ಇವರು ನಿಯಮ 72ರಡಿ ಮಂಡಿಸಿರುವ ಸೂಚನೆಗೆ ಹೇಳಿಕೆ

ವಿಷಯ: ರಾಜ್ಯದಲ್ಲಿ 545 ಪೊಲೀಸ್ ಸಬ್ ಇನ್ಸ್‌ಪೆಕ್ಟರ್(ಸಿವಿಲ್) ಗಳ ನೇಮಕಾತಿಯಲ್ಲಿ ನಡೆದಿರುವ ಪ್ರಶ್ನೆ ಪತ್ರಿಕೆಗಳ ಸೋರಿಕೆ, ಬ್ಲೂ ಟೂತ್‌ಗಳ ಬಳಕೆ, ಪರೀಕ್ಷಾ ಕೇಂದ್ರದ ಹಂಚಿಕೆ, ಕೋಠಡಿಗಳ ಹಂಚಿಕೆ, ಪರೀಕ್ಷಾ ಮೇಲ್ವಿಚಾರಕರುಗಳ ನೇಮಕ ಹೀಗೆ ಹಲವಾರು ಹಂತಗಳಲ್ಲಿ ಅವ್ಯವಹಾರದ ಮೂಲಕ ಅಕ್ರಮ ನೇಮಕಾತಿ ಪ್ರಕ್ರಿಯೆಯ ಬಗ್ಗೆ ಮಾನ್ಯ ಗೃಹ ಸಚಿವರನ್ನು ನಿಯಮ 72ರಡಿಯಲ್ಲಿ ಗಮನ ಸೆಳೆಯ ಬಯಸುತ್ತೇನೆ.

## ಸರ್ಕಾರದ ಉತ್ತರ

### I. ಪ್ರಕರಣದ ಉಗಮ (ಕಲಬುರಗಿ ಪ್ರಕರಣ):

1. 545 ಪಿಎಸ್‌ಐ ರವರುಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಿಂದ ದಿನಾಂಕ:21.01.2021 ರಂದು ಅಧಿಸೂಚನೆ ಸಂಖ್ಯೆ:98/ನೇಮಕಾತಿ-2/2020-21 ನ್ನು ಹೊರಡಿಸಲಾಗಿತ್ತು.
2. ಈ ಸಂಬಂಧ ದಿನಾಂಕ: 03.10.2021 ರಂದು ಲಿಖಿತ ಪರೀಕ್ಷೆಯನ್ನು ಒಟ್ಟು 54,104 ಅಭ್ಯರ್ಥಿಗಳಿಗೆ ರಾಜ್ಯದ 92 ಕೇಂದ್ರಗಳಲ್ಲಿ ನಡೆಸಲಾಗಿತ್ತು. ದಿನಾಂಕ: 19.01.2022 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಹೊರಡಿಸಲಾಗಿತ್ತು.
3. ದಿನಾಂಕ: 07.04.2022 ರಂದು ಕರ್ನಾಟಕ ರಾಜ್ಯದ ಮಾನ್ಯ ಗೃಹ ಮಂತ್ರಿಗಳು ಲಿಖಿತ ಪರೀಕ್ಷೆಯಲ್ಲಿ ರೋಲ್ ನಂ.9221946ನ್ನು ಹೊಂದಿದ ಅಭ್ಯರ್ಥಿ ವೀರೇಶನು ಒಎಂಆರ್ ಹಾಳೆಯಲ್ಲಿ ಅಕ್ರಮ ಎಸಗಿರುವ ಕುರಿತು ದೂರು ಅರ್ಜಿಯನ್ನು ಸ್ವೀಕರಿಸಿದ್ದು, ಸದರಿ ಅಕ್ರಮದ ಕುರಿತು ಸಿಐಡಿಗೆ ವಿಚಾರಣೆಗೆ ಆದೇಶಿಸಿರುತ್ತಾರೆ.
4. ದಿನಾಂಕ: 08.04.2022 ರಂದು ಸಿಐಡಿಯು ಈ ಬಗ್ಗೆ ವಿಚಾರಣೆಯನ್ನು ಪ್ರಾರಂಭಿಸಿದ್ದು, ಮೇಲ್ನೋಟಕ್ಕೆ ಒಎಂಆರ್ ಹಾಳೆಯಲ್ಲಿ ರೋಲ್ ನಂ.9221946ನ್ನು ಹೊಂದಿದ ಅಭ್ಯರ್ಥಿಯು ಅವ್ಯವಹಾರವನ್ನೆಸಗಿರುವುದು ಕಂಡುಬಂದಿರುತ್ತದೆ.
5. ಮೇಲ್ಕಂಡ ಅಂಶಗಳ ಆಧಾರದ ಮೇಲೆ ಸಿಐಡಿಯ ವಿಚಾರಣಾಧಿಕಾರಿಯವರು ದಿನಾಂಕ:09.04.2022 ರಂದು ಕಲಬುರ್ಗಿ ನಗರ ಚೌಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಮೊಕದ್ದಮೆ ಸಂಖ್ಯೆ: 48/2022, ಕಲಂ 120(ಬಿ), 465, 468, 471, 420 ಮತ್ತು 34 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.
6. ಡಿಜಿ ಮತ್ತು ಐಜಿಪಿ, ಕರ್ನಾಟಕ ರಾಜ್ಯ ರವರ ಆದೇಶ ಸಂಖ್ಯೆ: ಸಿಆರ್‌ಎಂ-9/60/ಕೆಬಿಸಿ/2022, ದಿನಾಂಕ:09.04.2022 ರಲ್ಲಿ ಮೇಲ್ಕಂಡ ಪ್ರಕರಣದ ಮುಂದಿನ ತನಿಖೆಯನ್ನು ಸಿಐಡಿಗೆ ವಹಿಸಲಾಗಿರುತ್ತದೆ.
7. ತನಿಖಾ ಸಂದರ್ಭದಲ್ಲಿ ಆರೋಪಿಗಳು ಈ ಕೆಳಕಂಡಂತೆ ಅವ್ಯವಹಾರಗಳನ್ನು ಎಸಗಿರುವುದು ಹೊರಹೊಮ್ಮಿರುತ್ತವೆ:
   - ಒಎಂಆರ್ ಉತ್ತರ ಪತ್ರಿಕೆಯಲ್ಲಿ ಖಾಲಿ ಬಿಟ್ಟ ಪ್ರಶ್ನೆಗಳಿಗೆ ಮೇಲ್ವಿಚಾರಕರು ಉತ್ತರವನ್ನು ಭರ್ತಿ ಮಾಡಿರುವುದು.
   - ಅಭ್ಯರ್ಥಿಗಳು ಬ್ಲೂಟೂತ್ ಸಾಧನಗಳನ್ನು ಬಳಕೆ ಮಾಡಿ ಉತ್ತರಗಳನ್ನು ಭರ್ತಿ ಮಾಡಿರುವುದು.

### II. ಬೆಂಗಳೂರು ನಗರದಲ್ಲಿ ದಾಖಲಾದ ಮೊದಲನೇ ಪ್ರಕರಣ:

8. ಕಲಬುರ್ಗಿ ನಗರದಲ್ಲಿ ನಡೆದ ಅವ್ಯವಹಾರಗಳು/ದಾಖಲಾದ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು, ಎಲ್ಲಾ ಸಫಲ ಅಭ್ಯರ್ಥಿಗಳ ಒಎಂಆರ್ ಹಾಳೆಗಳನ್ನು ತಜ್ಞರ ಪರೀಕ್ಷೆಗಾಗಿ ನ್ಯಾಯ ವಿಜ್ಞಾನ ಪ್ರಯೋಗಾಲಯಕ್ಕೆ ಹಂತ ಹಂತವಾಗಿ ಕಳುಹಿಸಲಾಗಿತ್ತು. ತಜ್ಞರ ಅಭಿಪ್ರಾಯ

ವರದಿಗಳಿಂದ ಬೆಂಗಳೂರು ನಗರದ 7 ಪರೀಕ್ಷಾ ಕೇಂದ್ರಗಳ ಒಟ್ಟು 22 ಅಭ್ಯರ್ಥಿಗಳ ಒಎಂಆರ್ ಹಾಳೆಗಳಲ್ಲಿ ತಿದ್ದುವಿಕೆ ನಡೆದಿರುವುದು ಕಂಡುಬಂದಿರುತ್ತದೆ.

9. ಈ ಸಂಬಂಧ ಸಿಐಡಿಯ ಸಹಾಯಕ ತನಿಖಾಧಿಕಾರಿಯವರು ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ದಾಖಲಿಸಿದ ದೂರಿನ ರೀತ್ಯಾ ಮೊಕದ್ದಮೆ ಸಂಖ್ಯೆ: 60/2022. ಕಲಂ 465, 468, 471, 420, 120 (ಬಿ) ರೆ/ವಿ 34 ಐಪಿಸಿ ರಡಿಯಲ್ಲಿ ದಿನಾಂಕ: 30.04.2022 ರಂದು ಪ್ರಕರಣವು ದಾಖಲಾಗಿರುತ್ತದೆ.

10. ಈ ಪ್ರಕರಣದಲ್ಲಿ ನೇಮಕಾತಿ ವಿಭಾಗದ ಸ್ಟ್ರಾಂಗ್‌ರೂಂನಲ್ಲಿ ಇರಿಸಲಾಗಿದ್ದ ಒಎಂಆರ್ ಹಾಳೆಗಳನ್ನು ತಿದ್ದುವಲ್ಲಿ ಶ್ರೀ. ಶಾಂತಕುಮಾರ್, ಡಿವೈಎಸ್‌ಪಿ ಮತ್ತು ಇತರರು ಪಾತ್ರ ವಹಿಸಿರುವುದು ಕಂಡುಬಂದಿದ್ದು, ಸದರಿಯವರುಗಳನ್ನು ಬಂಧಿಸಲಾಗಿರುತ್ತದೆ. ನೇಮಕಾತಿ ವಿಭಾಗದ ಅಂದಿನ ಎಡಿಜಿಪಿ ಶ್ರೀ ಅಮೃತ್ ಪಾಲ್ ರವರೂ ಸಹ ಇದರಲ್ಲಿ ಶಾಮೀಲಾಗಿರುವುದು ಕಂಡುಬಂದಿದ್ದು, ಸದರಿಯವರನ್ನು ಸಹ ಬಂಧಿಸಲಾಗಿರುತ್ತದೆ.

## III. <u>ಕಲಬುರಗಿ ಮತ್ತು ಬೆಂಗಳೂರಿನಲ್ಲಿ ದಾಖಲಾದ ಇತರೆ ಪ್ರಕರಣಗಳು:</u>

11. ಮೇಲ್ಕಂಡ ಪ್ರಕರಣಗಳ ತನಿಖಾ ಕಾಲದಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು ಎಲ್ಲಾ 54104 ಅಭ್ಯರ್ಥಿಗಳ ಡಾಟಾ ಶೀಟ್‌ನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ನಡೆಸಲಾಗಿರುತ್ತದೆ. ಮತ್ತು ಇದರಿಂದ ಕಲಬುರಗಿ ಹಾಗೂ ಬೆಂಗಳೂರಿನಲ್ಲಿ ಇತರ ಕೆಲವು ಅಭ್ಯರ್ಥಿಗಳು ಸಹಾ ಒಎಂಆರ್ ಹಾಳೆಗಳನ್ನು ತಿದ್ದುವ ಮತ್ತು ಬ್ಲೂಟೂತ್ ಸಾಧನದ ಬಳಕೆಯಿಂದ ಪರೀಕ್ಷೆಯಲ್ಲಿ ಅಕ್ರಮಗಳನ್ನು ಎಸಗಿದ್ದಾರೆ ಎಂಬುದು ಕಂಡುಬಂದಿರುತ್ತದೆ. ಆದಕಾರಣ ಕಲಬುರಗಿಯಲ್ಲಿ ಇತರ 08 ಪ್ರಕರಣಗಳು, ಬೆಂಗಳೂರಿನಲ್ಲಿ 06 ಪ್ರಕರಣಗಳು, ಧಾರವಾಡದಲ್ಲಿ 1 ಹಾಗೂ ತುಮಕೂರಿನಲ್ಲಿ 1 ಪ್ರಕರಣವನ್ನು ದಾಖಲಿಸಲಾಗಿರುತ್ತದೆ.

## IV. <u>ದಸ್ತಗಿರಿ, ಮಾಲು ವಶ ಹಾಗೂ ದೋಷಾರೋಪಣಾ ಪಟ್ಟಿಗಳ ವಿವರ:</u>

12. ಒಟ್ಟಾರೆ ಪಿ.ಎಸ್.ಐ ನೇಮಕಾತಿ ಪರೀಕ್ಷೆ-2021 ಕ್ಕೆ ಸಂಬಂಧಿಸಿದಂತೆ 16 ಪ್ರಕರಣಗಳು ದಾಖಲಾಗಿ ಸಿಐಡಿ ತನಿಖೆ ನಡೆದಿರುತ್ತದೆ.

13. 16 ಪ್ರಕರಣಗಳಲ್ಲಿ ಪ್ರಾಥಮಿಕ ದೋಷಾರೋಪಣಾ ಪಟ್ಟಿಗಳನ್ನು ಸಲ್ಲಿಸಲಾಗಿರುತ್ತದೆ ಹಾಗೂ ತನಿಖೆಯನ್ನು ಮುಂದುವರೆಸಲಾಗಿರುತ್ತದೆ.

14. ಈ ಪ್ರಕರಣಗಳಲ್ಲಿ ಒಟ್ಟಾರೆ 107 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದ್ದು 84 ಆರೋಪಿಗಳಿಗೆ ಜಾಮೀನು ದೊರಕಿರುತ್ತದೆ. ಇತರೆ ಆರೋಪಿಗಳ ಜಾಮೀನು ಅರ್ಜಿಗಳು ಕೆಳ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದಲ್ಲಿ ತಿರಸ್ಕೃತಗೊಂಡಿರುತ್ತವೆ.

15. ಡಿಜಿಪಿ, ಸಿಐಡಿ ರವರ ಖುದ್ದು ಮೇಲ್ವಿಚಾರಣೆಯಲ್ಲಿ ಸಿಐಡಿ ಅಧಿಕಾರಿಗಳ ತಂಡವು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ತನಿಖೆ ನಡೆಸುತ್ತಿದ್ದು, ಈ ಕುರಿತು ಮಾನ್ಯ ಉಚ್ಚ ನ್ಯಾಯಾಲಯವು ತನ್ನ ಪ್ರಶಂಸೆಯನ್ನು ವ್ಯಕ್ತಪಡಿಸಿರುತ್ತದೆ.

16. ಸರ್ಕಾರವು ಸಿಐಡಿ ತನಿಖೆಗೆ ಮುಕ್ತ ಹಸ್ತ ನೀಡಿರುವುದು ಎಡಿಜಿಪಿ ಮಟ್ಟದ ಅಧಿಕಾರಿಯನ್ನು ಬಂಧಿಸಿರುವುದರಿಂದ ತಿಳಿಯುತ್ತದೆ.

17. ಆರೋಪಿಗಳ ವಿರುದ್ಧ ಅರೆಸ್ಟ್ ವಾರೆಂಟ್‌ಗಳನ್ನು ಹೊರಡಿಸಲು, ಉದ್ಘೋಷಿತ ಆರೋಪಿಗಳೆಂದು ಘೋಷಿಸಲು ಮತ್ತು ಅವರ ಸ್ವತ್ತುಗಳನ್ನು ನ್ಯಾಯಾಲಯದಿಂದ ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಇತ್ಯಾದಿಯಾಗಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ.

18. ಪ್ರಕರಣಗಳಲ್ಲಿ ಭಾಗಿಯಾದ ಸಾರ್ವಜನಿಕ ನೌಕರರನ್ನು/ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಅಭಿಯೋಜನೆಗೆ ಒಳಪಡಿಸಲು ಸರ್ಕಾರದಿಂದ ನಿಗದಿತ ಅವಧಿಯೊಳಗೆ ಅಭಿಯೋಜನಾ ಮಂಜೂರಾತಿ ನೀಡಲಾಗಿರುತ್ತದೆ.

19. ಪ್ರಕರಣದಲ್ಲಿ ಭಾಗಿಯಾದ ಸರ್ಕಾರಿ ನೌಕರರನ್ನು/ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಕರ್ತವ್ಯದಿಂದ ಅಮಾನತ್ತು ಪಡಿಸಿ ಶಿಸ್ತು ಕ್ರಮ ಜರುಗಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.
20. ಬ್ಲೂಟೂತ್ ಡಿವೈಸ್‌ನ ಕಿಂಗ್‌ಪಿನ್ ಆಗಿರುವ ಆರೋಪಿ ಆರ್.ಡಿ.ಪಾಟೀಲ್ ಹಾಗೂ ಆತನ ಸಹಚರರಿಗೆ ಸಂಬಂಧಿಸಿದ ವಿವಿಧ ಬ್ಯಾಂಕ್ ಖಾತೆಗಳು ಹಾಗೂ ಮ್ಯೂಚುಯಲ್ ಫಂಡ್‌ಗಳಲ್ಲಿನ ರೂ.08 ಕೋಟಿಗೂ ಅಧಿಕ ಹಣವನ್ನು ಫ್ರೀಜ್ ಮಾಡಲಾಗಿದೆ ಹಾಗೂ 506 ಗ್ರಾಂ (ಸುಮಾರು ರೂ.20.16 ಲಕ್ಷ ಬೆಲೆಯ) ಚಿನ್ನದ ಆಭರಣಗಳನ್ನು ಆರ್.ಡಿ.ಪಾಟೀಲ್‌ರವರು ಕಲಬುರಗಿಯ ಆಕ್ಸಿಸ್ ಬ್ಯಾಂಕ್‌ನಲ್ಲಿ ಹೊಂದಿರುವ ಲಾಕರ್‌ನಿಂದ ವಶಪಡಿಸಿಕೊಳ್ಳಲಾಗಿದೆ. ಆರ್.ಡಿ ಪಾಟೀಲ್ ರವರು ಕಲಬುರ್ಗಿಯ ಆಕ್ಸಿಸ್ ಬ್ಯಾಂಕ್‌ನಲ್ಲಿ ಹೊಂದಿರುವ ಲಾಕರ್‌ನಿಂದ ವಶಪಡಿಸಿಕೊಳ್ಳಲಾಗಿದೆ.
21. ನೇಮಕಾತಿ ವಿಭಾಗದ ಆರೋಪಿತರು ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ರೂ.3.11 ಕೋಟಿಗೂ ಅಧಿಕ ಹಣವನ್ನು (ಶ್ರೀ ಅಮೃತ್ ಪಾಲ್ ರವರು ಶ್ರೀ ಶಂಭುಲಿಂಗಯ್ಯ ರವರ ಬಳಿ ಇಟ್ಟಿದ್ದ ರೂ.41 ಲಕ್ಷ, ಕೇಶವಮೂರ್ತಿ ರವರ ಬಳಿ ಇದ್ದ ಹರ್ಷನಿಗೆ ಸೇರಿದ ರೂ.30 ಲಕ್ಷ, ಆರೋಪಿ ಶ್ರೀಧರ್ ರವರ ಪತ್ನಿಯಿಂದ ರೂ.1.71 ಕೋಟಿ ಮತ್ತು ಶ್ರೀಧರ್ ರವರ ಸಂಬಂಧಿಯಾದ ನವೀನ್ ರವರಿಂದ ರೂ.70 ಲಕ್ಷಗಳು) ಹಲವಾರು ಸ್ಥಳಗಳಿಂದ ಅಮಾನತ್ತುಪಡಿಸಲಾಗಿದೆ.
22. ಸರ್ಕಾರವು ಈ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳ ವಿಚಾರಣೆ ಕುರಿತು ಗಂಭೀರತೆ ಹೊಂದಿದ್ದು, ಬೆಂಗಳೂರಿನ ಪ್ರಕರಣಗಳನ್ನು ನಿರ್ವಹಿಸಲು ಒಬ್ಬರು ಅನುಭವಿ ವಿಶೇಷ ಅಭಿಯೋಜಕರನ್ನು (ಶ್ರೀ ಪಿ.ಪ್ರಸನ್ನ ಕುಮಾರ್) ನೇಮಿಸಲಾಗಿರುತ್ತದೆ. ಕಲಬುರಗಿ ಪ್ರಕರಣಗಳನ್ನು ನಿರ್ವಹಿಸಲು ಮತ್ತೊಬ್ಬ ವಿಶೇಷ ಅಭಿಯೋಜಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.
23. ಕಲಂ 409 ಭಾ.ದಂ.ಸಂ. ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ 1988 ರ ಕಲಂಗಳನ್ನು ಸದರಿ ಪ್ರಕರಣಗಳಲ್ಲಿ ಸೇರ್ಪಡೆಗೊಳಿಸಲಾಗಿದೆ.
24. ಇನ್ನೂ ಹಲವು ಸಫಲ ಮತ್ತು ಅಸಫಲ ಅಭ್ಯರ್ಥಿಗಳ ಕುರಿತು ತನಿಖೆಯು ಮುಂದುವರೆದಿರುತ್ತದೆ.
25. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಕ್ರಿಮಿನಲ್ ಪಿಟಿಷನ್ ಸಂಖ್ಯೆ: 5136/2022 ರಲ್ಲಿ ಈ ಪ್ರಕರಣಗಳ ತನಿಖೆಯ ಮೇಲ್ವಿಚಾರಣೆಯನ್ನು ನಡೆಸಿರುತ್ತದೆ.
26. ವಿಚಾರಣಾ ಸಮಯದಲ್ಲಿ ಅಮೃತ್ ಪಾಲ್ ರವರು ಹಾರಿಕೆ ಉತ್ತರಗಳನ್ನು ನೀಡುತ್ತಿದ್ದರಿಂದ, ನಿಜಾಂಶವನ್ನು ಪತ್ತೆ ಹಚ್ಚುವ ಸಲುವಾಗಿ ಅವರನ್ನು ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಸುಳ್ಳು ಪತ್ತೆ ಪರೀಕ್ಷೆಗೊಳಪಡಿಸಲು ಅನುಮತಿ ಕೋರಿ ಮಾನ್ಯ 1ನೇ ಎಸಿಎಂಎಂ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ ಅಮೃತ್ ಪಾಲ್ ರವರು ಒಪ್ಪಿಗೆಯನ್ನು ನೀಡದ್ದರಿಂದ ಸದರಿ ಅರ್ಜಿಯು ತಿರಸ್ಕೃತಗೊಂಡಿರುತ್ತದೆ.
27. ಪಿಎಸ್‌ಐ ಮರು ಪರೀಕ್ಷೆಯ ಕುರಿತು ಸರ್ಕಾರದ ವಿರುದ್ಧ ಹಿಂದೆ ಪ್ರತಿಭಟನೆಯಲ್ಲಿ ನೇತೃತ್ವ ವಹಿಸಿದ್ದ ಕೆಲವು ಅಭ್ಯರ್ಥಿಗಳು ಕಳಂಕಿತರೆಂದು ಕಂಡುಬಂದಿದ್ದು, ಅವರುಗಳನ್ನು ಬಂಧಿಸಲಾಗಿರುತ್ತದೆ.

**ಒಇ 34 ಪಿಇಐ 2023**

(ಆರಗ ಜ್ಞಾನೇಂದ್ರ)
ಗೃಹ ಸಚಿವರು